ದಿನಾಂಕ: 29.11.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎಸ್ ವಿ ವಕೀಲರಿಂದಃ**

ನಾನು ಬಿಬಿಎ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನನ್ನ ಸ್ವಂತ ಊರು ಹೊಸಪೇಟೆ ಹತ್ತಿರ ಕೂಡ್ಲಿಗಿ ತಾಲೂಕು. ಈಗಲೂ ಅಲ್ಲಿಯೇ ವಾಸವಾಗಿರುತ್ತೇನೆ. ನಾವು ಮೊದಲು ಜವನಗೊಂಡನ ಹಳ್ಳಿಯಲ್ಲಿ ವಾಸವಾಗಿದ್ದೆವು. ನನ್ನ ತಂದೆ ಅಪಘಾತದಲ್ಲಿ ತೀರಿಕೊಂಡ ನಂತರ ಹೊಸಪೇಟೆಗೆ ಹೋಗಿರುತ್ತೇವೆ. ನನ್ನ ವಿಳಾಸ ಆಧಾರ್ ಕಾರ್ಡ್ ನಲ್ಲಿ ಕೂಡ್ಲಿಗಿ ತಾಲೂಕು ಎಂದು ಇರುತ್ತದೆ. ಜವನಗೊಂಡನಹಳ್ಳಿಯಲ್ಲಿ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನನಗೆ ತಾಯಿ ಇರುವುದಿಲ್ಲ. ನನ್ನ ತಂದೆಗೆ ನಾವು ಮೂರು ಜನ ಮಕ್ಕಳು. ನಾನು,ನನ್ನ ತಮ್ಮ ಮತ್ತು ನನ್ನ ತಂಗಿ. ನನ್ನ ತಂಗಿ ತುಮಕೂರಿನ ಸಿದ್ದಗಂಗದಲ್ಲಿ ಓದುತ್ತಿದ್ದು ನನ್ನ ತಮ್ಮ ಚಿತ್ರದುರ್ಗದಲ್ಲಿ ಪ್ಯಾರಾಮೆಡಿಕಲ್ ಓದುತ್ತಿದ್ದಾನೆ. ಅಪಘಾತವನ್ನು ನಾನು ಕಾಣ್ಣಾರೆನೋಡಿರುವುದಿಲ್ಲ. ಅಪಘಾತ ಹೇಗಾಯಿತು ಎಂದು ನನಗೆ ಗೊತ್ತಿರುತ್ತದೆ. ನನ್ನ ತಂದೆ ನನ್ನ ಮಾವನ ಬೈಕ್ ನಲ್ಲಿ ಚಾಲನೆ ಮಾಡುತ್ತಿದ್ದರು. ನನ್ನ ತಂದೆ ಬೈಕ್ ನ ಹಿಂಭಾಗದಲ್ಲಿ ಕುಳಿತಿದ್ದರು.

ಅಪಘಾತದ ನಂತರ ನನ್ನ ತಂದೆಯನ್ನು ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಆಸ್ಪತ್ರೆಯಲ್ಲಿ ಅಪಘಾತ ಹೇಗಾಯಿತು ಎಂದು ನಮೂದು ಮಾಡಿದ ಬಗ್ಗೆ ನನಗೆ ಗೊತ್ತು . ಚಿತ್ರದುರ್ಗದಿಂದ ನಿಮಾನ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದರು ನಿಮಾನ್ಸ್ ನಲ್ಲಿ ಒಳರೋಯಾಗಿ ಚಿಕಿತ್ಸೆ ಪಡೆದಿರುತ್ತಾರೆ.ನಿಮಾನ್ಸ್ ನಲ್ಲಿ 2-3 ದಿನ ಇದ್ದು ನಂತರ ವಿಕ್ಟೋರಿಯ ಆಸ್ಪತ್ರೆಗೆ ದಾಖಲಿಸಿದ್ದೆವು. ನಿಮಾನ್ಸ್ ನಲ್ಲಿ ಮತ್ತು ವಿಕ್ಟೋರಿಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾದ ಬಗ್ಗೆ ದಾಖಲೆಗಳು ಆಸ್ಪತ್ರೆಯಲ್ಲಿ ಇವೆ. ವಿಕ್ಟೋರಿಯ ಆಸ್ಪತ್ರೆಯಲ್ಲಿ ದಾಖಲೆಗಳು ಇರಬಹುದು. ನನ್ನ ತಂದೆ ಅಪಘಾತದಿಂದ ಆದ ಗಾಯಗಳಿಗೆ ಚಿಕಿತ್ಸೆ ಪಡೆದುಕೊಂಡಿಲ್ಲ ಬೇರೆ ಖಾಯಿಲೆಗೆ ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅಪಘಾತದಿಂದ

ಮೃತಪಟ್ಟಿಲ್ಲ ಎಂದರೆ ಸರಿಯಲ್ಲ.

ಅಪಘಾತದ ಬಗ್ಗೆ ನನ್ನ ಮಾವ ದೂರು ಕೊಟ್ಟಿರುತ್ತಾರೆ. ಅಪಘಾತವಾದ ಬಗ್ಗೆ 6 ನೇ ತಾರೀಖು ದೂರು ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ಅಪಘಾತ 27.09.2022 ರಂದು ಅಪಘಾತವಾಗಿರುತ್ತದೆ. ಅಪಘಾತವಾಗಿ ಸುಮಾರು 10 ದಿನಗಳ ನಂತರ ದೂರು ಕೊಟ್ಟಿದ್ದೇನೆ ಎಂದರೆ ನಿಜ. ನನ್ನ ಮಾವ ಡ್ಯೂಟಿಯಲ್ಲಿ ಇದ್ದುದ್ದರಿಂದ ಅಪಘಾತವಾದ ದಿನ ದೂರು ಕೊಡಲು ಆಗಿರಲಿಲ್ಲ. ದೂರು ನೀಡಿದವರು ನನ್ನ ತಾಯಿಯ ತಮ್ಮನಾಗಬೇಕು. ನನ್ನ ತಂದೆ ಬೈಕ್ ಚಾಲನೆ ಮಾಡಿ ಸ್ಕಿಡ್ ಆಗಿ ಬಿದ್ದು ಅಪಘಾತ ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಗಾಡಿ ಚಾಲನೆ ಮಡಲು ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ವಾಹನದ ಮಾಲೀಕನೊಂದಿಗೆ ಸೇರಿಕೊಂಡು ತಡವಾಗಿ ದೂರುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈ ಅಪಘಾತ ದಲ್ಲಿ ಕೆಎ 16 ಇಎಸ್ 6512 ರ ಬೈಕ್ ಭಾಗಿಯಾಗಿಲ್ಲ ಆದ್ದರಿಂದ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ನಿಹಾರಿಕಾಹೊಟೆಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನನ್ನ ತಂದೆ ಯಾವುದೇ ಕೆಲಸ ಮಾಡುತ್ತಿಲ್ಲದಿದ್ದರಿಂದ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಿಂಗಳಿಗೆ ರೂ.40 ಸಾವಿರ ದುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ.ಪರಿಹಾರ ಪಡೆಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು